


### ಹೊಣೆಗಾರಿಕೆ ಜಾಗೃತವಾಯಿತು

'ಮಣ್ಣು ಬರಡಾದೊಡೆ' (ಆ. 22, ಟಿ.ಎಸ್. ಚನ್ನೇಶ್) ಮುಖಪುಟ ಲೇಖನದಲ್ಲಿ ಮಣ್ಣಿನ ಅನಾರೋಗ್ಯ ಮತ್ತು ರಕ್ಷಣೆ ಕುರಿತ ವಿವರಗಳು ಉಪಯುಕ್ತವಾಗಿವೆ.

'ಅದರಲ್ಲೇನಿದೆ ಮಣ್ಣಂಗಟ್ಟಿ' ಎಂಬ ಆಡುಮಾತಿನಲ್ಲಿ ಮಣ್ಣನ್ನು ಬೆಲೆ ಇಲ್ಲದ್ದು ಎಂದು ತಿಳಿದಿದ್ದವರಿಗೆ ಲೇಖನ ಮಣ್ಣಿನ ಹಿರಿಮೆಯನ್ನು ವಿಷದೀಕರಿಸಿದೆ. ಕಬೀರದಾಸ್ ದೋಹಾದಿಂದ ಪ್ರಾರಂಭಿಸಿ, ವೈಜ್ಞಾನಿಕ ವಿಶ್ಲೇಷಣೆ ಮೂಲಕ ಮಣ್ಣಿನ ಹುಟ್ಟು, ಹಿನ್ನೆಲೆ, ರಚನೆ, ಜೈವಿಕ ಸೂಕ್ಷ್ಮತೆ, ಮಾನವ ನಿರ್ಮಿತ ಅಭಿವೃದ್ಧಿಗಳಿಂದಾದ ಹಾನಿಗಳ ಕುರಿತು ತಿಳಿಸಿ ನಮ್ಮ ಹೊಣೆಗಾರಿಕೆಯನ್ನು ಜಾಗೃತಗೊಳಿಸಿದೆ.

—ಹಿ.ಶಾ. ಸುಬ್ರಹ್ಮಣ್ಯ, ಬೆಂಗಳೂರು

### ಅರಿವಿನ ಬರಹ

ಮಣ್ಣಿನ ಕುರಿತ ಬರಹ ನೋಡಿದೊಡನೆ ಕುತೂಹಲ ಮೂಡಿತು. ತಾರಸಿ ತೋಟದಲ್ಲಿ ಆಸಕ್ತಿ ಹೊಂದಿರುವ ನನಗೆ ಮಣ್ಣಿನ ಕುರಿತು ಸಾಕಷ್ಟು ವಿಷಯಗಳು ತಿಳಿಯಿತು. ಮಣ್ಣಿನ ಮಹತ್ವ, ಕಣಗಳ ರಚನೆ ಮುಂತಾದವುಗಳ ಬಗ್ಗೆ ಅರಿವು ಹೆಚ್ಚಿತು.

—ಎಚ್.ವಿ. ಮಹದೇವಪ್ಪ, ಬೆಂಗಳೂರು

### ಬೆಳಕು ಚೆಲ್ಲುವ ಲೇಖನ

ಮಹತ್ವಪೂರ್ಣ ಲೇಖನ. ಮಣ್ಣಿನ ಹುಟ್ಟು, ರಚನೆ, ಸಂಶೋಧನೆಗಳು, ಪ್ರಸಕ್ತ ಸ್ಥಿತಿ... ಎಲ್ಲದರ ಬಗ್ಗೆ ಬೆಳಕು ಚೆಲ್ಲಿದ ಬರಹ. ಮಣ್ಣಿನ ಮೇಲೇ ನಿಂತಿದ್ದರೂ, ಮಣ್ಣೇ ಜೀವನಾಧಾರವೆಂದು ತಿಳಿದಿದ್ದರೂ ಮಣ್ಣಿನ ಕುರಿತು ತಿಳಿಯಲು ಹೋಗದ ನಮ್ಮ ಮನಸ್ಸಿನ ಕಣ್ಣು ತೆರೆಸಿದ ಲೇಖನ. ವಿಜ್ಞಾನದ ವಿಷಯಗಳನ್ನು ಹೀಗೆ ಸರಳವಾಗಿ ಕನ್ನಡದಲ್ಲಿ ಕಟ್ಟಿಕೊಟ್ಟಿದ್ದಕ್ಕೆ ಧನ್ಯವಾದ.

—ಸುಬ್ಬಲಕ್ಷ್ಮಿ ಹೆಚ್.ಕೆ., ಕೋಲಾರ

### ಚಿನ್ನದಂಥ ಆಟಗಾರರು!

'ಪದಕ ಗೆಲ್ಲದಿದ್ದರೂ ಇವರು ಚಿನ್ನವೇ...' (ಆ. 22, ಪ್ರಮೋದ ಕುಲಕರ್ಣಿ) ಲೇಖನದಲ್ಲಿ ಹೇಳಿದಂತೆ ನಿಜಕ್ಕೂ ಇವರು ಚಿನ್ನವೇ. ವಿನೇಶ್ ಫೋಗಟ್ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆಲ್ಲಲಿ ಎನ್ನುವುದು ಭಾರತೀಯರ ಆಶಯವಾಗಿತ್ತು. 100 ಗ್ರಾಂ ತೂಕದ ಕಾರಣಕ್ಕೆ ಪದಕ ಕೈ ತಪ್ಪಿದ್ದು ನಿರಾಸೆಯಾದರೂ ಅವರು ದೇಶಕ್ಕೆ ಚಿನ್ನದ ಆಟಗಾರರು ಎಂಬುದು ಸುಳ್ಳಲ್ಲ. ಆದರೆ ವಿನೇಶ್ ಕುಸ್ತಿಗೇ ವಿದಾಯ ಹೇಳಿದ್ದು ನೋವಾಯಿತು.

— ರಮೇಶ್ ಎಂ.ಎಸ್., ಮೈಸೂರು

### ವಿವಿಧ ಭಾವಗಳ ಹೂರಣ

'ಮೂರನೇ ಪ್ರಯಾಣ' (ಆ. 15, ಯಂಡಮೂರಿ ವೀರೇಂದ್ರನಾಥ್) ವಿಶೇಷ ಕಥೆ ಎದೆ ಕಲಕುವಂತಿದೆ. ಭಾರತಿಯ ಮುಗ್ಧತೆ, ಅತ್ತೆ ಮಾವನ ಹೃದಯವಂತಿಕೆ ಮನಮುಟ್ಟಿತು. ರಾಜೇಶ್ ನಯವಂಚಕತನ ಬೇಸರ ಮೂಡಿಸಿತು.

—ಚಲುವನಹಳ್ಳಿ ರಾಜಶೇಖರ ಹಾಸನ




'ಮರಗಳ ಮಹಾರಾಜ ಮದ್ದಾಲೆ' (ಆ. 15, ವಿನು ಗಂಗೆ) ಲೇಖನ ಚೆನ್ನಾಗಿದೆ. ಆಷಾಢ ಅಮಾವಾಸ್ಯೆ ದಿನ ಹಾಲೆ ಅಥವಾ ಮದ್ದಾಲೆ ಮರದ ತೊಗಟೆ ತೆಗೆದು ಕಷಾಯ ಮಾಡಿ ಕುಡಿಯುವ ಪದ್ಧತಿ ಇದೆ. ಈ ಕಷಾಯ ಹೆಚ್ಚು ರೋಗನಿರೋಧಕ ಗುಣ ಹೊಂದಿದೆ. ಬಿ.ಜಿ.ಎಲ್. ಸ್ವಾಮಿಯವರು ತಮ್ಮ 'ಹಸಿರು ಹೊನ್ನು' ಕೃತಿಯಲ್ಲಿ ಈ ಸಸ್ಯವನ್ನು ಗುರುತಿಸಿದ್ದಾರೆ.

— ಮಂಜುನಾಥ್ ಡಿ.ಜಿ.



### ಕಾಳಜಿಪೂರ್ವ ಬರಹ

'ಅಡುಗೆ ಎಂಬ ಜೀವನ ಕೌಶಲ' (ಆ. 22, ಸವಿತಾ ಮಾಧವ ಶಾಸ್ತ್ರಿ) ಉಪಯುಕ್ತ ಬರಹ. ಮಕ್ಕಳನ್ನು ಅಡುಗೆಯೆಡೆಗೆ ಏಕೆ ಪ್ರೇರೇಪಿಸಬೇಕು ಎಂಬುದರ ಬಗೆಗಿನ ಧನಾತ್ಮಕ ನೋಟ ಉತ್ತಮವಾಗಿದೆ. ಅಡುಗೆಯೊಂದಿಗೆ ಆಹಾರದ ಬಗ್ಗೆಯೂ ಮಕ್ಕಳಲ್ಲಿ ಜಾಗೃತಿ ಮೂಡಿಸುವ ಮೂಲಕ ಆರೋಗ್ಯಕರ ನಾಗರಿಕರನ್ನು, ನಾಳೆಗಳನ್ನು ಹೊಂದಲು ಸಾಧ್ಯವಾಗುತ್ತದೆ ಎಂಬುದನ್ನು ತಿಳಿಸಿಕೊಟ್ಟ ಕಾಳಜಿಪೂರ್ವ ಲೇಖನ.

—ರಾಮು

### ಸಂಬಂಧಗಳಿಗೆ ಭೇದವಿಲ್ಲ

'ತ್ವಾಹನ ಸಾರಥಿ' (ಆ. 22, ಕೆ.ಎಚ್. ಮುಸ್ತಾಫ) ಪ್ರಬಂಧ ಕಥೆ ಓದಿದಂತಿತ್ತು. ಸಂಬಂಧಗಳಿಗೆ ಊರು, ಗಿಡ, ಹೊಲ ಗದ್ದೆ, ವಾಹನ, ಪ್ರಾಣಿ, ಮನುಷ್ಯ ಎಂಬ ಭೇದವಿಲ್ಲ ಎಂಬುದನ್ನು ತಿಳಿಸಿತು.

—ಜಗದೀಶ ಬಿ. ಹೊಸೂರು, ಮೈಸೂರು



### ಆತ್ಮೀಯ ಕಥನ

ಆತ್ಮೀಯವಾಗಿ ನೆನಪಿಸಿಕೊಂಡು ಬರೆದ ಪ್ರಬಂಧ ಅದ್ಭುತವಾಗಿದೆ. ಮುಸ್ತಾಫ ಅವರ ಬರಹದ ಚಿತ್ರಕ ಶಕ್ತಿ ಬೆರಗುಗೊಳಿಸುತ್ತದೆ. ಆಲೋಚನಾ ಲಹರಿಯಲ್ಲಿ ನಮ್ಮನ್ನೂ ತೇಲಿಸಿಕೊಂಡು ಹೋಗುತ್ತದೆ.

— ಕುಚ್ಚಣ್ಣ ಶ್ರೀನಿವಾಸನ್

### ಬದುಕಿನ ಸೂತ್ರವೇ ತಾಳೆಯಾಗಲಿಲ್ಲ!

'ಸಾಂಸಾರಿಕ ಸಿಕ್ಕುಗಳು ಐನ್‌ಸ್ಟೈನ್ ತಬ್ಬಿಬ್ಬು' (ಆ. 22, ಸಿಡ್ಲಿ ಶ್ರೀನಿವಾಸ್) ಲೇಖನ ಓದಿ, ತಮ್ಮ ಸಾಧನೆಯ ಹಾದಿಯಲ್ಲಿ ಇಡೀ ಜಗತ್ತಿಗೆ ಸಾಪೇಕ್ಷ ಸಿದ್ಧಾಂತ ನೀಡಿದ ಐನ್‌ಸ್ಟೈನ್ ವೈಯಕ್ತಿಕ ಬದುಕಿನ ಸೂತ್ರಗಳೇ ತಾಳೆಯಾಗದ್ದು ಕನಿಕರವೆನಿಸಿತು. ಹಲವು ಖ್ಯಾತನಾಮರುಗಳದ್ದು ಇಂತಹದೇ ಕಥನಗಳಲ್ಲವೇ?

—ಎಂ. ಶಂಕರ್, ಬೆಂಗಳೂರು



### ಆಸಕ್ತಿದಾಯಕ ಸರಣಿ

ಮೇಧಾವಿ ಆಲ್ಬರ್ಟ್ ಐನ್‌ಸ್ಟೈನ್ ಅವರ ವೈಯಕ್ತಿಕ ಬದುಕಿನ ಕಥೆ ಅಚ್ಚರಿ ಮೂಡಿಸಿತು. 'ವಿಜ್ಞಾನಿಗಳ ದಾಂಪತ್ಯ ಬದುಕು' ಸರಣಿ ಆಸಕ್ತಿದಾಯಕವಾಗಿದೆ. ವಿಜ್ಞಾನಿಗಳ ಕುರಿತು ಸಾಮಾನ್ಯರಿಗೆ ತಿಳಿಯದ ಇಂಥ ಹಲವು ಸಂಗತಿಗಳಿವೆ. ಆಸಕ್ತಿಕರವಾದ ಇಂಥ ಇನ್ನಷ್ಟು ಬರಹಗಳು 'ಸುಧಾ'ದಲ್ಲಿ ಪ್ರಕಟಗೊಳ್ಳಲಿ ಎಂದು ಆಶಿಸುವೆ.

—ದರ್ಶನ್ ಹೆಗ್ಡೆ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in